## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

**ಸಿಸಿ ನಂ. 110/2020**

ಚಾಸಾ-8 ಫ್ರಾಸಾ-5

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 08-04-2026

| | | |
|---|---|---|
| ಹೆಸರು | : | ಸಾಯಿನಾಥ |
| ತಂದೆಯ ಹೆಸರು | : | ಸಂಗಪ್ಪ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಬಡದಾಳ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ಚಾಸಾ 1 ನನ್ನ ಅಳಿಯ. ಚಾಸಾ 6 ಪರಿಚಯ ಇರುತ್ತದೆ. ಚಾಸಾ 7, 9 ರವರು ಪರಿಚಯ ಇರುತ್ತಾರೆ. ಚಾಸಾ 10 ರಿಂದ 12 ಸಂಬಂಧಿಕರು ಇರುತ್ತಾರೆ. ಮೃತ ಬಸವರಾಜ ನನ್ನ ಮಾವನಾಗಬೇಕು.

ಮೃತ ನನ್ನ ಮಾವ ಒಂದು ದಿನ ಮಣೂರು ದೇವಸ್ಥಾನಕ್ಕೆ ಮರಳಿ ಸಾಯಂಕಾಲ 4 ಗಂಟೆಗೆ ಬರುತ್ತಿರುವಾಗ ಕರಜಗಿ ಗ್ರಾಮ ಹತ್ತಿರ ಅಪಘಾತ ಆಗಿರುತ್ತದೆ. ನಂತರ ಅಫಜಲಪುರ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದು ದಾಖಲು ಮಾಡಿರುತ್ತೇವೆ. ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಗೆ ಒಯ್ಯುತ್ತಿರುವಾಗ ಮಾರ್ಗ ಮಧ್ಯ ಗಬ್ಬೂರು ಬಳಿ ತೀರಿಕೊಂಡಿರುತ್ತಾನೆ. ಆ ನಂತರ ಮರಳಿ ಅಫಜಲಪುರ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದು ಮರಣೋತ್ತರ ಪರೀಕ್ಷೆ ಮಾಡಿ ಶವ ನೀಡಿರುತ್ತಾರೆ. ನನಗೆ ಇಷ್ಟೆ ಗೊತ್ತಿರುತ್ತದೆ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸ.ಸ.ಅ. ರವರಿಂದ

ದಿಃ 31-05-2019 ರಂದು ಸಾಯಂಕಾಲ 4-30 ಕ್ಕೆ ದೇವಸ್ಥಾನದಿಂದ ಹಿಂದುರುಗಿ ಬಡದಾಳ ಗ್ರಾಮಕ್ಕೆ ಹೋಗುತ್ತಿರುವಾಗ ಹೈದ್ರಾ ಕ್ರಾಸ ಹತ್ತಿರ ಪೆಟ್ರೋಲ ಬಂಕ ಬಳಿ ಒಬ್ಬ ಟಂಟಂ ಚಾಲಕನು ಅತೀವೇಗದಿಂದ ಬಂದು ಮೃತ ಬಸವರಾಜ ನಡೆಸುತ್ತಿದ್ದ ಮೋಟರಸೈಕಲಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾನೆ ಎಂದರೆ ಸರಿ. ಸದರಿ ಅಪಘಾತದಲ್ಲಿ ಬಸವರಾಜನ ತಲೆಗೆ ಗಂಭೀರ ಗಾಯವಾಗಿ ರಕ್ತಸ್ರಾವ ಆಗಿ ತೀರಿಕೊಂಡಿದ್ದ ಎಂದರೆ ಸರಿ. ಸದರಿ ಅಪಘಾತದಲ್ಲಿ ಚಾಸಾ 6 ರವರಿಗೂ ಸಹ ಗಾಯಗಳು ಅಗಿರುತ್ತದೆ ಎಂದರೆ ಸಾಕ್ಷಿ ಅವರೂ ಸಹ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 01-06-2019 ರಂದು ಅಪಘಾತಪಡಿಸಿದ ಟಂಟಂಚಾಲಕನ ಹೆಸರು ದಿನೇಶ ಮಾನೆ ಇರುತ್ತದೆ ಎಂದು ಪೋಲಿಸರ ಮುಂದೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಸಾಕ್ಷಿಗೆ ಮೃತ ಬಸವರಾಜ ನಡೆಸುತ್ತಿದ್ದ ಎಂದು ಹೇಳುವ ಮೋಟರ ಸೈಕಲನ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-**7** ರಿಂದ **10** ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಅಪಘಾತ ಪಡಿಸಿತು ಎಂದು ಹೇಳುವ ಟಂಟಂನ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-**11** ರಿಂದ **14** ಎಂದು ಗುರುತಿಸಲಾಗಿದೆ. ಸಾಕ್ಷಿಯೂ ಆರೋಪಿತನನ್ನು ನೋಡಿಲ್ಲ ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **MSD** ವಕೀಲರಿಂದಃ-

ಅಪಘಾತವಾದ ಸಮಯದಲ್ಲಿ ನಾವು ಸಹ ದೇವರಿಗೆ ಹೋಗಿದ್ದೆವು. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತ ಕುರಿತು ಇದೇ ಮೊದಲ ಬಾರಿಗೆ ಹೇಳಿಕೆ ನೀಡುತ್ತಿದ್ದೇನೆ ಎಂದರೆ ಸರಿ. ಪೋಲಿಸರು ಏನು ಬರೆದುಕೊಂಡರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಮೃತ ನನ್ನ ಮಾವ ಇರುವುದರಿಂದ ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ